# ಆಸ್ಕರ್‌ಗೆ ವಿಸಾರಣೈ



ಭಾರತದಿಂದ ಆಸ್ಕರ್ (ಅಕಾಡೆಮಿ) ಪ್ರಶಸ್ತಿಗೆ ಅಧಿಕೃತ ಎಂಟ್ರಿ ಆಗಿ ತಮಿಳಿನ 'ವಿಸಾರಣೈ' ಆಯ್ಕೆಯಾಗಿ ಬಾಲಿವುಡ್ ಪಂಡಿತರನ್ನು ಬೆಚ್ಚಿಬೀಳಿಸಿದೆ. ಸಾಮಾನ್ಯವಾಗಿ ಭಾರತದಿಂದ ವಿದೇಶಿ ಚಿತ್ರಗಳ ವಿಭಾಗಕ್ಕೆ ಆಯ್ಕೆಯಾಗಲು ಹಿಂದಿ ಚಿತ್ರಗಳ ಮಧ್ಯೆಯೇ ಪೈಪೋಟಿ ಇರುತ್ತದೆ. ಈ ಸಲ ಮಾತ್ರ ಎರಡು ದಕ್ಷಿಣದ ಚಿತ್ರಗಳೇ ಸ್ಪರ್ಧೆಯಲ್ಲಿ ಮುಂಚೂಣಿಯಲ್ಲಿದ್ದವು. ಅದರಲ್ಲೊಂದು ಕನ್ನಡದ ಅತ್ಯುತ್ತಮ ಚಿತ್ರ ತಿಥಿ. ಕೂದಳೆಲೆ ಅಂತರದಲ್ಲಿ ತಿಥಿ ಯನ್ನು ಹಿಂದಿಕ್ಕಿ ವಿಸಾರಣೈ ಆಯ್ಕೆಯಾಗಿದೆ. ತಮಿಳುನಾಡಿನಿಂದ ವಲಸೆ ಬಂದ ನಾಲ್ವರು ಕಾರ್ಮಿಕರು ತಾವು ಮಾಡದೇ ಇದ್ದ ತಪ್ಪಿನ ವಿಚಾರಣೆಗಾಗಿ ಗುಂಟೂರಿನಲ್ಲಿ ಪೊಲೀಸರ ಕೈವಶವಾಗುವ ಕಥೆ, ಕೊನೆಗೆ ರಾಜಕೀಯ ಮತ್ತು ಅಪರಾಧ ಲೋಕದ ಒಳಸುಳಿಗಳಿಂದಾಗಿ ದುರಂತ ಅಂತ್ಯ ಕಾಣುತ್ತದೆ. ವೆಟ್ರಿಮಾರನ್ ನಿರ್ದೇಶನದ ಸಿನಿಮಾ ಪೊಲೀಸ್ ಕ್ರೌರ್ಯದ ಕರಾಳ ಬಾಹುಗಳನ್ನು ಎಳೆಎಳೆಯಾಗಿ ಬಿಚ್ಚಿಟ್ಟಿದೆ. ಆಸ್ಕರ್ ಸ್ಪರ್ಧೆಗೆ ಆಯ್ಕೆಯಾದದ್ದಕ್ಕೆ ಚಿತ್ರದ ನಿರ್ಮಾಪಕ ಧನುಶ್ ಖುಷಿಯಾಗಿದ್ದಾರೆ.

ಇತ್ತೀಚೆಗೆ ನಡೆದ 72ನೇ ವೆನಿಸ್ ಚಿತ್ರೋತ್ಸವಕ್ಕೂ ಈ ಸಿನಿಮಾ ಆಯ್ಕೆಯಾಗಿತ್ತು. ಈಗಾಗಲೆ ಮೂರು ರಾಷ್ಟ್ರೀಯ ಪ್ರಶಸ್ತಿಗಳನ್ನೂ ಗೆದ್ದುಕೊಂಡಿರುವ ಈ ಚಿತ್ರ ಬಾಕ್ಸಾಫೀಸ್‌ನಲ್ಲಿ ಸಾಕಷ್ಟು ಸದ್ದು ಮಾಡಿದೆ. ಅತ್ಯುತ್ತಮ ತಮಿಳು ಚಿತ್ರ, ಅತ್ಯುತ್ತಮ ಪೋಷಕ ಪಾತ್ರ (ನಾಡೋಡಿಗಳ್ ಎಂಬ ಸೂಪರ್‌ಹಿಟ್ ಚಿತ್ರ ನಿರ್ದೇಶಿಸಿದ್ದ ನಟ ಸಮುದಿರಕನಿ) ಮತ್ತು ಅತ್ಯುತ್ತಮ ಸಂಕಲನ (ದಿವಂಗತ ಟಿ.ಇ.ಕಿಶೋರ್) ಈ ಮೂರೂ ಪ್ರಶಸ್ತಿಗಳು ಚಿತ್ರಕ್ಕೆ ಗರಿ ಮೂಡಿಸಿದ್ದವು.

■ ಬಿಂದು

